ಮುಂಜಾನೆ ಮಾತು
ಜೀವನದಲ್ಲಿ ಎದುರಾಗುವ ಎಲ್ಲ ಸಮಸ್ಯೆಗಳಿಗೂ ಉತ್ತರವಿದೆ ಎನ್ನಲಾಗದು. ನಮ್ಮ ಮಿತಿಯನ್ನರಿತುಕೊಂಡು ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸುತ್ತ ಸಾಗುವುದೇ ಸರಿಯಾದ ಮಾರ್ಗ.

ವಿಜಯವಾಣಿ
ಕನ್ನಡಿಗರ ಧ್ವನಿ
ಇಂದು ವಿಶ್ವ ಜಲದಿನ
ನಂ.1* ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ VIJAYAVANI ● MANGALURU ಮಂಗಳೂರು ● ಸಂಪುಟ 6 ● ಸಂಚಿಕೆ 352
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682 22 ಮಾರ್ಚ್ 2018 | ಗುರುವಾರ

Sahyadri College of Engineering & Management
CENTRAL LIBRARY
Adyar, Mangalore-7

# 230 ಗ್ರಾಪಂಗಳಲ್ಲಿ ಏಕರೂಪ ಸ್ವಚ್ಛತಾ ನೀತಿ

■ ವಿಜಯವಾಣಿ ಸುದ್ದಿಜಾಲ ಮಂಗಳೂರು

ಬಯಲು ಬಹಿರ್ದೆಸೆ ಮುಕ್ತ ಜಿಲ್ಲೆಯೆಂದು ಘೋಷಿಸಲ್ಪಟ್ಟ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ನೈರ್ಮಲ್ಯದಡಿ ಸುಸ್ಥಿರತೆ ಕಾಯ್ದುಕೊಳ್ಳುವ ಸಲುವಾಗಿ ಜಿಲ್ಲೆಯ ಎಲ್ಲ 230 ಗ್ರಾಮ ಪಂಚಾಯಿತಿಗಳಲ್ಲಿ ಏಕರೂಪದ ಸ್ವಚ್ಛತಾ ನೀತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಇದಕ್ಕೆ ಪೂರಕವಾಗಿ ಜನರ ವರ್ತನಾ ಮನೋಭಾವದಲ್ಲಿ ಬದಲಾವಣೆ ಮೂಡಿಸಲು ಹಲವು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಸ್ವಚ್ಛತೆಯ ಮಹತ್ವ ಸಾರುವ ಸ್ವಚ್ಛತಾ ಗೀತೆ ಮೊಳಗಿಸುವ ಕರೆಗಂಟೆಗಳನ್ನು ಪ್ರಾಯೋಗಿಕವಾಗಿ ಅಡ್ಯಾರಿನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಅಡ್ಯಾರು ವಿನ್ಯಾಸಗೊಳಿಸಿದ್ದು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಅಧಿಕಾರಿಗಳ ಕೊಠಡಿಗಳಲ್ಲಿ ಅಳವಡಿಸಲಾಗಿದೆ. ಕಳ್ಳಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 1127 ಮನೆಗಳಿಗೆ ಅಳವಡಿಸುವ ಗುರಿ ಹೊಂದಿದ್ದು, ಕಾಲಿಂಗ್ ಬೆಲ್ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ.

ಈ ಕಾಲಿಂಗ್ ಬೆಲ್‌ಗಳಿಗೆ ತಲಾ 250 ರೂಪಾಯಿಯಂತೆ ತಯಾರಿಕಾ ವೆಚ್ಚ ತಗಲಿದ್ದು, ಮಂಗಳೂರು ರಾಮಕೃಷ್ಣ ಮಿಷನ್ ಮತ್ತು ಸಹ್ಯಾದ್ರಿ ಕಾಲೇಜು ಪ್ರಾಯೋಜಕತ್ವ ವಹಿಸಿದ್ದಾರೆ. ಕಾಲಿಂಗ್ ಬೆಲ್ ತಯಾರಿಕೆ ವೆಚ್ಚದ ಶೇ.50 ಭಾಗ (2.40 ಲಕ್ಷ ರೂ.) ಚೆಕ್‌ನ್ನು ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ಯು.ಎಂ. ಭೂಷಿ ಜಿಪಂ ಸಿಇಒ ಡಾ.ಎಂ.ಆರ್.ರವಿ ಅವರಿಗೆ ಹಸ್ತಾಂತರಿಸಿದರು. ಕಳ್ಳಿಗೆ ಗ್ರಾಮ ಪಂಚಾಯಿತಿಯ ಎಲ್ಲ ಮನೆ, ಶಾಲೆ, ಅಂಗನವಾಡಿ ಕೇಂದ್ರಗಳಿಗೆ, ಜಿಲ್ಲೆ ಹಾಗೂ ತಾಲೂಕು ಮಟ್ಟದ ಸರ್ಕಾರಿ ಕಚೇರಿಗಳಲ್ಲಿ ಮತ್ತು ಕೆಲವು ಮಾದರಿ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಅಳವಡಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.


ವಿಜಯವಾಣಿ ಚಿತ್ರ

ಕಾಲಿಂಗ್ ಬೆಲ್ ತಯಾರಿಕೆ ವೆಚ್ಚದ 2.40 ಲಕ್ಷ ರೂ. ಚೆಕ್‌ನ್ನು ಪ್ರಾಂಶುಪಾಲ ಡಾ.ಯು.ಎಂ. ಭೂಷಿ ಅವರು ಜಿ.ಪಂ ಸಿಇಒ ಡಾ.ಎಂ.ಆರ್.ರವಿ ಅವರಿಗೆ ಹಸ್ತಾಂತರಿಸಿದರು.